| O.S | 533/2009 |
|---|---|
| D.W. | 1 |

ದಿನಾಂಕ : 04-08-2021 ರಂದು ಪಾಟೀ ಸವಾಲಿಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಡಿ.ಎಸ್.ಜೆ ವಕೀಲರಿಂದಃ**

8. ನಿವೇಶನ ನಂ.4 ರ ಪಶ್ಚಿಮಕ್ಕೆ ನನ್ನ ಅಕ್ಕನಾದ ಮಮ್‌ತಾಜ್ ರವರ ಸ್ವತ್ತು ಇದೆ. ಈ ರೀತಿ ಪಶ್ಚಿಮಕ್ಕಿರುವ ನನ್ನ ಅಕ್ಕನ ಜಮೀನಿನ ನಂ.113.1ಎ. ನನ್ನ ಅಕ್ಕನ ಈ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ, ನನ್ನ ಅಕ್ಕನಿಗೆ ಈ ಜಮೀನು ವಿಭಾಗದಲ್ಲಿ ನೀಡಲಾಗಿತ್ತು, ನನ್ನ ಅಕ್ಕನ ಈ ಜಮೀನು ನನ್ನ ಜಮೀನಾದ ಸರ್ವೆ ನಂ. 95.1ಎ ಜಮೀನಿಗಿಂತಲೂ ಹೆಚ್ಚಿನ ವಿಸ್ತೀರ್ಣ ಇರಬಹುದು. ನಾನು ಹಿಂದಿನ ಮುದ್ದತ್ತಿನ ಪಾಟೀ ಸವಾಲಿನಲ್ಲಿ ಹೇಳಿದಂತೆ ನಿವೇಶನ ಸಂಖ್ಯೆ 4 ಕ್ಕೆ ಲಗತ್ತಾಗಿರುವ ಉಳಿಕೆ ಜಮೀನು 28 ಅಡಿ ಉದ್ದ 6 ಅಡಿ ಅಗಲ ವಿಸ್ತೀರ್ಣ ಹೊಂದಿದೆ. ಈ ಲಗತ್ತಾಗಿರುವ ಜಮೀನು ನಿವೇಶನ ಸಂಖ್ಯೆ 4 ಪೂರ್ವ ದಿಕ್ಕಿನಲ್ಲಿದೆ. ನಿವೇಶನ ಸಂಖ್ಯೆ 4 ಪೂರ್ವಕ್ಕೆ ನಿವೇಶನ ಸಂಖ್ಯೆ 3, ಸಿದ್ದಲಿಂಗದೇವರು ರವರ ಜಮೀನು ಬರುತ್ತದೆ. ನಾನು ಹೇಳಿದಂತೆ ನಿವೇಶನ ಸಂಖ್ಯೆ 4 ಪೂರ್ವಕ್ಕೆ 28 ಅಡಿ ಉದ್ದ 6 ಅಡಿ ಅಗಲ ವಿಸ್ತೀರ್ಣದ ಉಳಿಕೆ ಜಾಗ ಇರುವುದಿಲ್ಲ ಎಂದರೆ ಸುಳ್ಳು. ನಾನು ಹೇಳುವ ನಿವೇಶನ ಸಂಖ್ಯೆ 4 ರ ಪೂರ್ವದ ಖಾಲಿ ಜಾಗಕ್ಕೆ ಯಾವ ಕಡೆಯಿಂದ ಓಡಾಡಲು ದಾರಿ ಇದೆ ಎಂದರೆ ಉತ್ತರ ದಿಕ್ಕಿನಲ್ಲಿ ರಸ್ತೆ ಇದೆ. ನಾನು ಹೇಳಲು ನಿವೇಶನ ಸಂಖ್ಯೆ 4 ಹಾಗು ಅದಕ್ಕೆ ಲಗತ್ತಾಗಿರುವ ಉಳಿಕೆ ಜಾಗ ಒಂದಕ್ಕೊಂದು ಹೊಂದಿಕೊಂಡಿದೆ. ನಿವೇಶನ ಸಂಖ್ಯೆ 4ಕ್ಕೆ ಲಗತ್ತಾಗಿರುವ ಉಳಿಕೆ ಜಾಗದ ಪೂರ್ವಕ್ಕೆ ಯಾವುದೇ ರಸ್ತೆ ಇಲ್ಲ, ನಿವೇಶನ ಸಂಖ್ಯೆ 4 ಕ್ಕೆ ಲಗತ್ತಾಗಿರುವ ಉಳಿಕೆ ಜಾಗಕ್ಕೆ ಯಾವುದೇ ಪ್ರತ್ಯೇಕ ರಸ್ತೆ ಎಂದರೆ ಸರಿ. ನಾನು ಹೇಳುವ ನಿವೇಶನ ಸಂಖ್ಯೆ 4 ರ ಉಳಿಕೆ ಜಾಗ ನಿವೇಶನ ಸಂಖ್ಯೆ 3 ರ ಪಶ್ಚಿಮಕ್ಕೆ ಲಗತ್ತಾಗಿದೆ ಎಂದರೆ ಸರಿ. ನಾನು ಹೇಳುವ ಉಳಿಕೆ ಜಾಗ ನಿವೇಶನ ಸಂಖ್ಯೆ 3ಕ್ಕೆ ಸಂಬಂಧಿಸಿದ್ದು ಎಂದರೆ ಸುಳ್ಳು.

9. ಪಂಚಾಯತಿಯ ಇಒ ಸಮಕ್ಷಮ ನನ್ನ ಹಾಗು ಪ್ರತಿವಾದಿಗಳ ಜಮೀನನ್ನು ಸರ್ವೆ ಮಾಡಲು ಆದೇಶವಾಗಿತ್ತು ಎಂದರೆ ಸರಿ. ಇದರಂತೆ ಸರ್ವೆ ಆಗಿ ನಿಪಿ-14 ರಂತೆ ಸರ್ವೆ ವರದಿ ಸಲ್ಲಿಸಲಾಗಿತ್ತು ಎಂದರೆ ಸರಿ. ನಿಪಿ-14 ರ ರೀತ್ಯ ನಾನು ಪ್ರತಿವಾದಿಗಳ ಜಮೀನನ್ನು ಒತ್ತುವರಿ ಮಾಡಿದ್ದೇನೆಂದು ವರದಿಯಾಗಿದೆ ಎಂದರೆ ಸುಳ್ಳು. ಸರ್ವೆ ನಂ.95.1ಎ ನ ಪೂರ್ವ ದಿಕ್ಕಿನಲ್ಲಿ ವಾದಿಗಳು ಒತ್ತುವರಿ ಮಾಡಿದ್ದಾರೆ. ಸರ್ವೆ ನಂ.95.1ಎ ನ ಪೂರ್ವ ದಿಕ್ಕಿನಲ್ಲಿ ನಾನು ಹೇಳಿದಂತೆ ವಾದಿಗಳು ಒತ್ತುವರಿ ಮಾಡಿದ್ದಾರೆ ಎಂಬುವ ಜಾಗ ನಿವೇಶನ ಸಂಖ್ಯೆ 4 ರ ಲಗತ್ತಾಗಿರುವ ಜಮೀನು ಎಂದರೆ ಸರಿ. ನಾನು ಹೇಳುವಂತೆ ವಾದಿಗಳು 2006 ರಲ್ಲಿ ಒತ್ತುವರಿ ಮಾಡಿದ್ದಾರೆ. ಈ ರೀತಿ ಒತ್ತುವರಿ ಮಾಡಿದ ಜಮೀನಿನ ಸ್ವಾಧೀನ ಕೋರಿ ನಾನು ಯಾವುದೇ ದಾವೆ ಹೂಡಿಲ್ಲ, ಇದಲ್ಲದೇ ವಾದಿಗಳು ಉತ್ತರದ ಕಡೆ ಅಂದರೆ ರಸ್ತೆಯಿರುವ ದಿಕ್ಕಿನಲ್ಲಿ ಸಾವಿರ ಅಡಿಯಷ್ಟು ಒತ್ತುವರಿ ಮಾಡಿದ್ದಾರೆ.

| O.S | 533/2009 |
|---|---|
| D.W. | 1 |

10. ಈಗ ನೋಡುವ ಛಾಯಚಿತ್ರದಲ್ಲಿ ಇರುವ ಗಾಜಿಯಿರುವ ಮನೆ ವಾದಿಗೆ ಸೇರಿದ್ದು ಎಂದರೆ ಸರಿ. ಸದರಿ ಛಾಯಚಿತ್ರವನ್ನು ನಿಪಿ-27 ಎಂದು ಗುರುತಿಸಲಾಯಿತು. ನಿಪಿ-27 ರ ಫ್ರೆಂಡ್ಸ್ ಟೆಕ್ಸ್‌ಟೈಲ್ಸ್ ಎಂಬ ಫಲಕವಿರುವ ಕಟ್ಟಡ ನನಗೆ ಸೇರಿದ್ದು ಎಂದರೆ ಸರಿ. ನಿಪಿ-27 ರ ಕಟ್ಟಡದ ಮುಂಭಾಗ ಇರುವ ದಾರಿ ಉತ್ತರದ ರಸ್ತೆ ಎಂದರೆ ಸರಿ. ನಿಪಿ-27 ರ ಛಾಯಚಿತ್ರದಲ್ಲಿ ಕಾಣುವಂತೆ ವಾದಿಗಳ ಕಟ್ಟಡ ನನ್ನ ಕಟ್ಟಡಕ್ಕಿಂತಲೂ ಹಿಂದೆ ಬರುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಇನ್ನೊಂದು ಛಾಯಚಿತ್ರದಲ್ಲಿ ನನ್ನ ಹಾಗು ವಾದಿಗಳ ಕಟ್ಟಡ ಇದೆ ಎಂದರೆ ಸರಿ. ಸದರಿ ಛಾಯಚಿತ್ರವನ್ನು ನಿಪಿ-28 ಎಂದು ಗುರುತಿಸಲಾಯಿತು. ನಿಪಿ-28ರಲ್ಲಿ ಕಾಣುವಂತೆ ವಾದಿಯ ಗೋಡೆಗೆ ಲಗತ್ತಾಗಿ ನನ್ನ ಕಟ್ಟಡದ ಗೋಡೆ ಕಟ್ಟಿದ್ದೇನೆ ಎಂದರೆ ಸುಳ್ಳು. ನಿಪಿ-20 ರಲ್ಲಿ ಕಾಣುವ ಬಿಳಿ ಬಣ್ಣದ ಕಟ್ಟಡ ನನ್ನದು ಸದರಿ ಬಿಳಿ ಬಣ್ಣದ ಕಟ್ಟಡ ವಾದಿಯ ಕಟ್ಟಡಕ್ಕೆ ಲಗತ್ತಾಗಿದೆ ಎಂದರೆ ಸರಿ. ನಾನು ನಿಪಿ18 ಹಾಗು 20 ರಲ್ಲಿ ಕಾಣುವ ಬಿಳಿ ಬಣ್ಣದ ಕಟ್ಟಡ ಸೆಟ್‌ಬ್ಯಾಕ್ ಜಾಗವನ್ನು ಒತ್ತುವರಿ ಮಾಡಿ ಕಟ್ಟಿದ್ದೇನೆ ಎಂದರೆ ಸುಳ್ಳು. ಸದರಿ ಒತ್ತುವರಿ ಮಾಡಿ ಕಟ್ಟಿದ ಕಟ್ಟಡ ನಿವೇಶನ ಸಂಖ್ಯೆ 3 ರ ಜಾಗ ಎಂದರೆ ಸುಳ್ಳು. ನಿಪಿ-27 ಹಾಗು 28 ರಲ್ಲಿ ಕಾಣುವ ಫ್ರೆಂಡ್ಸ್ ಟೆಕ್ಸ್‌ಟೈಲ್ಸ್ ಎಂಬ ಕಟ್ಟಡ ಉತ್ತರ ದಿಕ್ಕಿನ್ನುಒತ್ತುವರಿ ಮಾಡಿ ಕಟ್ಟಲಾಗಿದೆ ಎಂದರೆ ಸುಳ್ಳು. ದಾವಾಸ್ತಿ ನಿವೇಶನ ಸಂಖ್ಯೆ 3 ರ ಒಂದು ಭಾಗ, ಸೆಟ್‌ಬ್ಯಾಕ್ ಜಾಗ ಎಂದರೆ ಸುಳ್ಳು ಇದನ್ನು ಒತ್ತುವರಿ ಮಾಡಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ನಾನು ಕಟ್ಟಡ ಕಟ್ಟಿದ್ದೇನೆ ಎಂದರೆ ಸುಳ್ಳು. ನಾನು ಕಟ್ಟಡ ಕಟ್ಟಿರುವ ಸೆಟ್‌ಬ್ಯಾಕ್ ಜಾಗ ವಾದಿಗೆ ಸೇರಿದ್ದು ಎಂದರೆ ಸುಳ್ಳು.

11. ನನ್ನ ತಂದೆ ನನ್ನ ಅಕ್ಕ ಮಮತಾಜ್‌ಬೇಗಂಗೆ ನಿವೇಶನ ಸಂಖ್ಯೆ 4 ರ ಪಶ್ಚಿಮದ ಜಾಗವನ್ನು ಮಾರಾಟ ಮಾಡಿದ್ದರು ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ

**(ಈ ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ